'ನೀನು ಎಂದಾದರೂ ಆ ದೊಡ್ಡ ಹೋಟೆಲ್‌ಗಳ ಒಳಗೆ ಹೋಗಿದ್ದೀಯಾ? ಅದು ಪೂರ್ತಿ ಬೇರೆಯದೇ ಜಗತ್ತು. ಅಲ್ಲಿನ ಜನ ನಮ್ಮ ಥರ ಅಲ್ಲವೇ ಅಲ್ಲ. ಅವರು ನಡೆಯುವುದು ಬೇರೆ ಥರ, ನುಡಿಯುವುದು ಬೇರೆ ಥರ... ಸೂರ್ಯ ಪ್ರತಿದಿನ ಬೆಳಿಗ್ಗೆ ಅಂಥವರಿಗಾಗಿಯೇ ಹುಟ್ಟುತ್ತಾನೆ. ನಮ್ಮಂಥವರಿಗಾಗಿ ಅಲ್ಲ. ನಾವು ಅವರ ನೆರಳಿನಲ್ಲಿ ಬದುಕುತ್ತೇವೆ. ಈ ನಗರದಲ್ಲಿ ಪ್ರತಿ ಹೊಸ ಹೋಟೆಲ್ ನಿರ್ಮಾಣವಾದಾಗಲೂ ಆ ನೆರಳು ದೊಡ್ಡದಾಗುತ್ತಲೇ ಹೋಗುತ್ತದೆ. ಎದುರಿನ ಗಾಜಿನ ಬಾಗಿಲಿಂದ ಹೊರಬರುವವರನ್ನು ಸೂಕ್ಷ್ಮವಾಗಿ ಗಮನಿಸು. ಎಷ್ಟು ಜನ ನಿನ್ನ ಹಾಗೆ ಕಾಣುತ್ತಾರೆ? ಒಂದಲ್ಲ ಒಂದು ದಿನ ನಾನೂ ಆ ಜಗತ್ತಿನಲ್ಲಿ, ಆ ಜನರ ಮಧ್ಯೆ ಒಬ್ಬಳಾಗಿ ಉಳಿದುಬಿಡುತ್ತೇನೆ ನೋಡ್ತಿರು.'

'ನನಗೇನೋ ಅದು ಬಿಡುಗಡೆಯ ದಾರಿ ಎಂದು ಅನಿಸುತ್ತಿಲ್ಲ.'

'ಮತ್ತೇನು ಮಾಡ್ಬೇಕು ಅಂತಿಯಾ? ಬಾಡಿಗೆ ಸೈಕಲ್ ಡ್ರೈವರ್‌ನನ್ನು ಮದುವೆಯಾಗಲಾ?'

ಹ್ವಾಯ್ ತಲೆತಗ್ಗಿಸುವನು. ಲ್ಯಾನ್ ಸುರಿಯುತ್ತಿರುವ ಮೌನವನ್ನು ಸರಿಸಿಕೊಂಡು ಕಾಲಪ್ಪಳಿಸುತ್ತಾ ನಡೆದುಹೋಗುವಳು...

★★★

ಹುಡುಗನೊಬ್ಬ ಮುಡಿಸಿದ ಹೂವನ್ನು ಪುಸ್ತಕದಲ್ಲಿಟ್ಟು ಒಣಗಿಸಿ ಅವನ ಕೋಮಲ ನೆನಪುಗಳನ್ನು ಮನಸಲ್ಲಿ ಸದಾ ಹಸಿರಾಗಿ ಇರಿಸಿಕೊಳ್ಳುವಂಥ ಸಣ್ಣ ಸಣ್ಣ ಸಂಗತಿಗಳಲ್ಲಿಯೇ ಸಾರ್ಥಕತೆಯನ್ನು ಕಾಣುತ್ತಿದ್ದ ಹುಡುಗಿಗೆ ದೊಡ್ಡ ನಗರದ ದೊಡ್ಡ ಕಟ್ಟಡಗಳ ದೊಡ್ಡ ನೆರಳುಗಳು ದೊಡ್ಡ ದೊಡ್ಡ ಆಸೆಗಳ ಬೀಜ ಬಿತ್ತಿವೆ. ಸಂತೃಪ್ತಿಯ ಜಾಗದಲ್ಲಿ ಭೋಗದ ಅಭಿಲಾಷೆ ಹೆಡೆಯಾಡಲಾರಂಭಿಸಿದೆ. 'ಮುಂದೊಂದು ದಿನ ವೈಭವೋಪೇತ ಹವಾನಿಯಂತ್ರಿತ ಕೋಣೆಯಲ್ಲಿ ನಿಶ್ಚಿಂತೆಯಿಂದ ಮಲಗಿ ನಿದ್ರಿಸಬೇಕು' ಎಂಬ ಕನಸಿಗೆ ಈಗಿನ ಜೀವನದ ಎಲ್ಲ ರಾತ್ರಿಗಳ ನಿದ್ರೆಯನ್ನೂ, ದೇಹವನ್ನೂ ಅಡವಿಟ್ಟು ಬದುಕುತ್ತಿದ್ದಾಳೆ. ಆದರೆ ಆ ಕನಸು ನನಸಾದರೆ ಎಲ್ಲವೂ ಸುಖಾಂತ್ಯವಾಗುತ್ತದೆಯಾ? ಈ ಬಗ್ಗೆ ಅವಳಿಗೂ ಗೊತ್ತಿಲ್ಲ. 'ನನಗೇನೋ ಅದು

